**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**
**ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ: 162, ಗಿರಿನಗರ, ಬೆಂಗಳೂರು.**

**ನವೆಂಬರ್ 2021ರ ಮಾಹೆಯ 2ನೇ ವಾರ್ಡ್ ಸಮಿತಿ ಸಭೆಯ ನಡವಳಿಗಳು**

***********

ಉಲ್ಲೇಖ: ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಕಛೇರಿ ಆದೇಶದ ಸಂಖ್ಯೆ: ಬಿ12(5)/ಪಿಆರ್/35/2020-21. ದಿನಾಂಕ:22-09-2021.

******

ದಿನಾಂಕ: 23-11-2021
ಸ್ಥಳ : ವಾರ್ಡ್ ಕಛೇರಿ, ಸ್ವಾಮಿ ವಿವೇಕಾನಂದ ಉದ್ಯಾನವನ, ಗಿರಿನಗರ
ಸಮಯ : ಪೂರ್ವಾಹ್ನ 11.00 ಗಂಟೆಗೆ

**ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳ ವಿವರ**

| ಕ್ರ.ಸಂ | ಹೆಸರು | ಪದನಾಮ |
|---|---|---|
| 1 | ಶ್ರೀ ಸುನಿಲ್‌ಕುಮಾರ್.ಪಿ | ಮಾನ್ಯ ಮುಖ್ಯ ನಗರ ಯೋಜಕರು ಹಾಗೂ ನೋಡಲ್ ಅಧಿಕಾರಿಗಳು. |
| 2 | ಶ್ರೀ ಶ್ರೀಧರ್ ಕೋಟ್ರೆ | ಸಹಾಯಕ ಅಭಿಯಂತರರು, ಕಾರ್ಯದರ್ಶಿ ಮತ್ತು ಸಂಚಾಲಕರು ವಾರ್ಡ್-162, ಗಿರಿನಗರ. |
| 3 | ಶ್ರೀ ಶ್ರೀಕಾಂತ್ | ವರ್ಕ್ ಇನ್ಸ್‌ಪೆಕ್ಟರ್.ಗಿರಿನಗರ ಉಪವಿಭಾಗ. |
| 4 | ಶ್ರೀ ಲಕ್ಷ್ಮೀ ದೇವಿ | ಕಿರಿಯ ಅಭಿಯಂತರರು.ಬೆಸ್ಕಾಂ, ವಾರ್ಡ್ ನಂ-162,ಗಿರಿನಗರ |
| 5 | ಶ್ರೀ ಮಂಜುನಾಥ್.ಎನ್ | ವರ್ಕ್ ಇನ್ಸ್‌ಪೆಕ್ಟರ್ ಬಿಡ್ಲ್ಯೂಎಸ್ಎಸ್‌ಬಿ.ವಾರ್ಡ್ ನಂ-162 |
| 6 | ಶ್ರೀ ಶ್ರೀ ಲಕ್ಷ್ಮೀ | ಕಿರಿಯ ಆರೋಗ್ಯ ಪರಿವೀಕ್ಷಕರು.ವಾರ್ಡ್ ನಂ-162. |
| 7 | ಶ್ರೀ ರವಿಚಂದ್ರನ್ | ವಾರ್ಡ್ ಸಮಿತಿ ಸದಸ್ಯರು ವಾರ್ಡ್ ನಂ-162,ಗಿರಿನಗರ. |
| 8 | ಶ್ರೀ.ಎಸ್.ಎಮ್ ಆರ್.ಪ್ರಸಾದ್ | ವಾರ್ಡ್ ಸಮಿತಿ ಸದಸ್ಯರು ವಾರ್ಡ್ ನಂ-162,ಗಿರಿನಗರ. |
| 9 | ಶ್ರೀ ರಂಜಿತ್.ಎಸ್.ಪಿ | ವಾರ್ಡ್ ಮಾರ್ಷಲ್ ನಂ-162,ಗಿರಿನಗರ. |
| 10 | ಶ್ರೀ ಅಜಿತ್ ಕುಮಾರ್ | ವಾರ್ಡ್ ಅಧ್ಯಕ್ಷರು.ವಾರ್ಡ್ ನಂ-162,ಗಿರಿನಗರ. |

ಮಾನ್ಯ ಮುಖ್ಯ ನಗರ ಯೋಜಕರು, ಬೆಂಗಳೂರು ಮಹಾನಗರ ಪಾಲಿಕೆ, ಆದ ಶ್ರೀ ಸುನಿಲ್‌ಕುಮಾರ್.ಪಿ ರವರು ಗಿರಿನಗರ ವಾರ್ಡ್ ಸಮಿತಿಯ ನೋಡಲ್ ಅಧಿಕಾರಿಯಾಗಿ ಹಾಜರಿದ್ದ ಸದಸ್ಯರೆಲ್ಲರಿಗೂ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

1. ವಾರ್ಡ್-162 ವ್ಯಾಪ್ತಿಯಲ್ಲಿ ಎಷ್ಟು ಜನರಿಗೆ ವ್ಯಾಕ್ಸಿನೇಷನ್ ಹಾಕಲಾಗಿದೆ ಎಂಬ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು ಮತ್ತು ಮುಂದಿನ ಸಭೆಯಲ್ಲಿ ಅದರ ಮಾಹಿತಿಯನ್ನು ತಿಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿರುತ್ತಾರೆ.
2. ಗಿರಿನಗರ ವಾರ್ಡ್‌ನಲ್ಲಿ ಗಾರ್ಬೆಜ್ ಕುರಿತಂತೆ ಪ್ರಸ್ತುತ ಜಾಗದಲ್ಲಿ ನಡೆಯುತ್ತಿರುವ ಗಾರ್ಬೆಜ್ ಸಂಗ್ರಹಣೆಯನ್ನು ಬೇರೆ ಕಡೆಗೆ ಗಾರ್ಬೇಜ್ ಸಂಗ್ರಹಣೆ ಮಾಡಲು ಪೂರಕ ಸ್ಥಳವನ್ನು ಗುರುತಿಸಿ ಸಂಗ್ರಹಣೆ ಮಾಡಬೇಕೆಂದು ಚರ್ಚಿಸಲಾಯಿತು.
3. ಗಿರಿನಗರ ವಾರ್ಡ್-162ರಲ್ಲಿ ಕಸವನ್ನು ಮನೆ ಮನೆಗೆ ಹೋಗಿ ಸಂಗ್ರಹಿಸುತ್ತಿದ್ದು ಅದರಲ್ಲಿ ಒಣ ಕಸ ಮತ್ತು ಹಸಿ ಕಸವನ್ನು ಪ್ರತ್ಯೇಕವಾಗಿ ಸಂಗ್ರಹಿಸಲಾಗುತ್ತಿದೆ.ಆಗಿದ್ದರು ಸಹ ಸಾರ್ವಜನಿಕರು ಕಸವನ್ನು ಎಲ್ಲೆಂದರಲ್ಲಿ ಹಾಕುತ್ತಿದ್ದಾರೆ ಆಗಾಗಿ ಕಸವನ್ನು ಎಲ್ಲೆಂದರಲ್ಲಿ ಹಾಕುವವರ ಮೇಲೆ ನಿಘಾವಹಿಸಿ ಅವರಿಗೆ ಬಿಬಿಎಂಪಿ ನಿಯಮದ ಪ್ರಕಾರ ದಂಡ ಹಾಕಿ ಸೂಕ್ತ ಕ್ರಮ ಕೈಗೊಳ್ಳಲು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಮಾನ್ಯ ಅಧ್ಯಕ್ಷರು ಸೂಚಿಸಿರುತ್ತಾರೆ.
4. ಗಿರಿನಗರ ವಾರ್ಡ್‌ಲ್ಲಿ ಅಲ್ಲಲ್ಲಿ ಬಿದ್ದಿರುವ ಮಣ್ಣು ಮತ್ತು ಇತರ ತ್ಯಾಜ್ಯವನ್ನು ಸಂಗ್ರಹಿಸಿ ಅದನ್ನು ಸೂಕ್ತ ಜಾಗಕ್ಕೆ ಹಾಕುವುದಕ್ಕೆ ಟೆಂಡರ್ ಕರೆಯಲಾಗಿತ್ತು. ಅದರಂತೆ ಗುತ್ತಿಗೆದಾರರೊಬ್ಬರಿಗೆ ಟೆಂಡರ್ ಸಹ ಆಗಿತ್ತು ಈಗ ಆ ಗುತ್ತಿಗೆದಾರ ಬರುತ್ತಿಲ್ಲ ಹಾಗಾಗಿ ಸಮಸ್ಯೆಯಾಗಿರುವುದರಿಂದ ಆ ಗುತ್ತಿಗೆದಾರನಿಗೆ ನೋಟಿಸ್ ನೀಡಿ ಸೂಕ್ತ ಕ್ರಮಕೈಗೊಳ್ಳುವಂತೆ ಅಥವಾ ಅವಶ್ಯಬಿದ್ದರೆ ಮರು ಟೆಂಡರ್ ಕರೆಯುವಂತೆ ವಾರ್ಡ್ ಅಭಿಯಂತರರಿಗೆ ಮಾನ್ಯ ಅಧ್ಯಕ್ಷರು ಸೂಚಿಸಿರುತ್ತಾರೆ.
5. ಗಿರಿನಗರ ವಾರ್ಡ್ ವಿದ್ಯಾನಗರ ಬಸ್ ಸ್ಟಾಪ್ 1st cross ನಲ್ಲಿ ವಾಹನಗಳ ಸಂಖ್ಯೆ ಹೆಚ್ಚಿದ್ದು ಅವುಗಳು ತುಂಬಾ ಸ್ಪೀಡಾಗಿ ಬರುವುದರಿಂದ ಅಲ್ಲಿರುವ ಸಾರ್ವಜನಿಕರಿಗೆ ಮತ್ತು ಮಕ್ಕಳಿಗೆ ವೃದ್ಯಾಪ್ಯರಿಗೆ ಓಡಾಡಲು ತುಂಬಾ ಕಷ್ಟವಾಗಿರುತ್ತದೆ. ಆದ್ದರಿಂದ ಅಲ್ಲಿ ಒಂದು ಹಂಪ್ಸ್ (speed breakers) ಹಾಕಬೇಕೆಂದು ಸಭೆಯಲ್ಲಿ ಚರ್ಚಿಸಲಾಯಿತು, ಆಗಾಗಿ ಅಲ್ಲಿ ಒಂದು ಹಂಪ್ಸ್ (speed breakers) ಹಾಕಬೇಕೆಂದು ವಾರ್ಡ್ ಅಭಿಯಂತರರಿಗೆ ಮಾನ್ಯ ಅಧ್ಯಕ್ಷರು ಸೂಚಿಸಿರುತ್ತಾರೆ.
6. ಗಿರಿನಗರ ವಾರ್ಡ್-162 ರಲ್ಲಿ ಪಾದಚಾರಿ ಮಾರ್ಗದಲ್ಲಿ ಕೆಳಮಟ್ಟದಲ್ಲಿ ವಿದ್ಯುತ್ ಟ್ರಾನ್ಸಫಾರ್ಮರ್ ಇರುವುದರಿಂದ ಸಾರ್ವಜನಿಕರಿಗೆ ಓಡಾಡಲು ತುಂಬಾ ತೊಂದರೆಯಾಗಿರುವುದರಿಂದ ಅದನ್ನು Special Design ಮೂಲಕ ಅದನ್ನು 7-8 ಅಡಿ ಎತ್ತರದಲ್ಲಿ ಹಾಕಿ ಸೂಕ್ತ ಕ್ರಮ ವಹಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾನ್ಯ ಅಧ್ಯಕ್ಷರು ಸೂಚಿಸಿರುತ್ತಾರೆ.
7. ಗಿರಿನಗರ ವಾರ್ಡ್ ವಿದ್ಯಾನಗರ ಬಸ್ ಸ್ಟಾಪ್ ಹತ್ತಿರ ಚಾಮುಂಡಿ ಸ್ಲಮ್ ರೋಡ್‌ನಲ್ಲಿ ವಾಹನಗಳು ಅನವಶ್ಯಕವಾಗಿ ಪುಟ್ ಬಾತ್ ಮೇಲೆ ಓಡಾಡುತ್ತಿರುವುದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿದೆಯೆಂದು ಸಭೆಯಲ್ಲಿ ಚರ್ಚಿಸಲಾಯಿತು, ಪುಟ್‌ಪಾತ್‌ನ್ನು ಎತ್ತರಕ್ಕೆ ಮಾಡಿ ಸಾರ್ವಜನಿಕರಿಗೆ ಓಡಾಡಲು ಅನುಕೂಲ ಮಾಡಿಕೊಡಲು ತಿಳಿಸಲಾಯಿತು.
8. ಬೆಂಗಳೂರು ಜಲ ಮಂಡಳಿ ವತಿಯಿಂದ ಕಾಮಗಾರಿ ನಡೆಯುತ್ತಿದ್ದು ಅಲ್ಲಲ್ಲಿ trench ಅಗೆದಿದ್ದು ಅಲ್ಲಿ trench ಇಳಿದಿದ್ದು ಅದಕ್ಕೆ ವೆಟ್ ಮಿಕ್ಸ್ ಹಾಕಿ ಡಾಂಬರೀಕರಣ ಮಾಡಲು ಸಭೆಯಲ್ಲಿ ಡಬ್ಲ್ಯೂಎಸ್‌ಎಸ್‌ಬಿಯ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾನ್ಯ ಅಧ್ಯಕ್ಷರು ಸೂಚಿಸಿದರು.

೯. ಗಿರಿನಗರ ವಾರ್ಡ್ ವ್ಯಾಪ್ತಿಯಲ್ಲಿ ಅಲ್ಲಲ್ಲಿ ಕಟ್ಟಡದ ಅವಶೇಷಗಳು (Debris) ಗಳನ್ನು ರಾತ್ರಿ ಸಮಯದಲ್ಲಿ ರಸ್ತೆ ಬದಿಯಲ್ಲಿ ಸುರಿಯುತ್ತಿರುವುದು ಕಂಡುಬಂದಿದ್ದು, ಅದನ್ನು ತಡೆಗಟ್ಟಲು ಬಿಬಿಎಂಪಿ ಮಾರ್ಷಲ್‌ಗಳಿಗೆ ದಂಡ ವಿಧಿಸಿ ಕ್ರಿಮಿನಲ್ ಕೇಸ್ ಹಾಕಲು ಸೂಚಿಸಿದರು.

ಮೇಲಿನ ಎಲ್ಲಾ ಅಂಶಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು, ಸದರಿ ವಿಷಯಗಳ ಬಗ್ಗೆ ಕ್ರಮಕೈಗೊಳ್ಳಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿ, ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

23/11/21

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ: 162, ಗಿರಿನಗರ

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ: 162, ಗಿರಿನಗರ

ಪ್ರತಿಯನ್ನು:

1.ಮಾನ್ಯ ಆಯುಕ್ತರು, ಬೃ.ಬೆ.ಮ.ಪಾಲಿಕೆ, ಎನ್. ಆರ್. ವೃತ್ತ ರವರ ಮಾಹಿತಿಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2.ಮಾನ್ಯ ವಿಶೇಷ ಆಯುಕ್ತರು (ಆಡಳಿತ) ರವರ ಮಾಹಿತಿಗಾಗಿ ಸಲ್ಲಿಸಿದೆ.
3.ಮಾನ್ಯ ವಿಶೇಷ ಆಯುಕ್ತರು (ಆರೋಗ್ಯ & ಘ.ತ್ಯಾ.ನಿ) ರವರ ಮಾಹಿಗಾಗಿ ಸಲ್ಲಿಸಿದೆ.
4.ಮಾನ್ಯ ಉಪ ಆಯುಕ್ತರು ((ಆಡಳಿತ) ರವರ ಮಾಹಿಗಾಗಿ ಸಲ್ಲಿಸಿದೆ.
5.ಮಾನ್ಯ ಜಂಟಿ ಆಯುಕ್ತರು (ದಕ್ಷಿಣ) ರವರ ಮಾಹಿಗಾಗಿ ಸಲ್ಲಿಸಿದೆ.
6.ಮುಖ್ಯ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
7.ಕಾರ್ಯಪಾಲಕ ಅಭಿಯಂತರರು.ಬಸವನಗುಡಿ ರವರ ಅವಗಾಹನೆಗೆ ಸಲ್ಲಿಸಿದೆ.
8.ವಾರ್ಡ್ ಸಮಿತಿ ಸದಸ್ಯರ ಮಾಹಿತಿಗಾಗಿ ಕಳುಹಿಸಿದೆ.
9.ಕಛೇರಿ ಪ್ರತಿ.